ಷೆಡ್ಯೂಲ್‌ಗಳಿಗೆ ಒಟ್ಟು ೩೭೨ ವಾಹನಗಳನ್ನು ಒದಗಿಸಲಾಗಿದೆ. ಘಟಕವಾರು ವಿವರ ಈ ರೀತಿ ಇದೆ.

ಗದಗ	೧೦೩
ರೋಣ	೭೨
ಲಕ್ಕ್ಮೇಶ್ವರ	೭೩
ಕೊಪ್ಪಳ	೭೨
ಕುಷ್ಟಗಿ	೫೨
	———
	೩೭೨
	———

ಕೊರತೆ ಇರುವುದಿಲ್ಲ.
ಉದ್ಭವಿಸುವುದಿಲ್ಲ.

ವಿಷಯ:- ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಎ.ಆರ್.ಟಿ.ಓ ಆಫೀಸ್ ಪ್ರಾರಂಭ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೩:- (೪೭೩)
ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಹೊಸದಾಗಿ ಸಹಾಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಇರುವುದು ನಿಜವೆ.

ಆ) ಹಾಗಿದ್ದಲ್ಲಿ ಬಸವಕಲ್ಯಾಣದಿಂದ ಬಾಲ್ಕಿಗೆ ಬದಲಾಯಿಸುವ ಬಗ್ಗೆ ಪ್ರಸ್ತಾವನೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಬಸವಕಲ್ಯಾಣ ಮತ್ತು ಬಾಲ್ಕಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು?

ಈ) ಬಸವಕಲ್ಯಾಣದಲ್ಲಿ ಎಲ್ಲಾ ಉಪವಿಭಾಗ ಕಛೇರಿಗಳು ಇರುವುದು ನಿಜವಲ್ಲವೆ.

ಉ) ಬಸವಕಲ್ಯಾಣವು ರಾಷ್ಟ್ರೀಯ ಹೆದ್ದಾರಿ ೯ರಲ್ಲಿದ್ದು, ಹೆಚ್ಚು ತೆರಿಗೆ ವಸೂಲಾಗುವ ಸಾಧ್ಯತೆಯಿರುವುದರಿಂದ, ಸರ್ಕಾರವು ಬಸವಕಲ್ಯಾಣದಲ್ಲಿ ಹೊಸ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುತ್ತದೆಯೆ?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ಹೌದು.
ಹೌದು.

ಬಾಲ್ಕಿ - ೧೭೯ ವಾಹನಗಳು
ಬಸವಕಲ್ಯಾಣ - ೨೨೭ ವಾಹನಗಳು

ಹೌದು.
ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಸರ್ಕಾರ ಇದನ್ನು ಪರಿಶೀಲಿಸುವುದು.

ವಿಷಯ:- ಬೀದರ್ ಜಿಲ್ಲೆಯಲ್ಲಿ ನಡೆದ ದರೋಡೆಗಳ ಪ್ರಕರಣಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೫:-(೪೭೫)
ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?